ಗ್ರಾಮೀಣ ಅರಣ್ಯ ಪ್ರದೇಶದಲ್ಲಿ ಗ್ರಾಮಸ್ಥರು ಸಸಿ (ಗಿಡ) ಇರುವಾಗಲೇ ಅರಣ್ಯ ನಾಶ ಮಾಡುತ್ತಿರುವುದು

ಳಿಟಿಟಿ (ಉಳಿಂ) ಶ್ರೀ ಹೆಚ್. ವೈ. ಮೇಟಿ (ಗುಳೇದ ಗುಡ್ಡ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಗ್ರಾಮೀಣ ಅರಣ್ಯ ಪ್ರದೇಶದಲ್ಲಿ ಗ್ರಾಮಸ್ಥರು ಅರಣ್ಯದಲ್ಲಿ ಸಸಿ (ಗಿಡ) ಇರುವಾಗಲೇ ಅದನ್ನು ನಾಶ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಅದನ್ನು ನಿರ್ಬಂಧಿಸಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು).—

ಅ) ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ನಿರ್ದಿಷ್ಟ ಪ್ರಕರಣಗಳು ಬಂದಾಗ, ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಬಿಜಾಪುರ ಜಿಲ್ಲೆಯಲ್ಲಿ ಮೀನುಗಾರಿಕಾಭಿವೃದ್ಧಿಗಾಗಿ ಮಾಡಿರುವ ವೆಚ್ಚ ಹಾಗೂ ಲಾಭ

ಳಿಟಿಟ (ಉಳಿಲ) ಶ್ರೀ ಹೆಚ್. ವೈ. ಮೇಟಿ (ಗುಳೇದ ಗುಡ್ಡ).—ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಬಿಜಾಪುರ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ೧೯೯೩-೯೪ರ ಸಾಲಿನಲ್ಲಿ ಮಾಡಿದ ಒಟ್ಟು ವೆಚ್ಚ ಎಷ್ಟು ?

ಆ) ೧೯೯೩-೯೪ನೇ ಸಾಲಿನಲ್ಲಿ ಇಲಾಖಾ ಸಿಬ್ಬಂದಿಗಾಗಿ ವೇತನ ಹಾಗೂ ಇತರ ಭತ್ಯೆಗಳಿಗಾಗಿ ಆ ಖರ್ಚು ಎಷ್ಟು ?

ಇ) ಸರ್ಕಾರಕ್ಕೆ ಆ ಇಲಾಖೆಯಿಂದ ಬಂದ ಲಾಭ ಎಷ್ಟು ?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು).—

ಅ) ೧೯೯೩-೯೪ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಈವರೆವಿಗೆ ರೂ. ೩,೪೫,೭೬೪-೦೦ಗಳ ವೆಚ್ಚವಾಗಿರುತ್ತದೆ.

ಆ) ೧೯೯೩-೯೪ನೇ ಸಾಲಿನಲ್ಲಿ ಇಲಾಖೆ ಸಿಬ್ಬಂದಿಯ ವೇತನಕ್ಕಾಗಿ ಮಾಡಲಾದ ಖರ್ಚು ರೂ. ೧೧,೯೪,೩೦೮-೦೦ಗಳು ಮತ್ತು ಇತರ ಭತ್ಯೆಗಾಗಿ ರೂ. ೩೧,೦೦೦-೦೦ಗಳು ವೆಚ್ಚವಾಗಿರುತ್ತವೆ

ಇ) ವಿಜಾಪುರ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಈವರೆವಿಗೆ ಬಂದಿರುವ ಆದಾಯ ರೂ. ೩,೨೨,೦೦೦-೦೦.

ಅರಣ್ಯ ಆಭಿವೃದ್ಧಿಗೊಳಿಸಲು ಸರ್ಕಾರದವರು ತೆಗೆದುಕೊಂಡ ಕ್ರಮ

ಳಿಟಿಟ (೭೭೯) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಶಿಗ್ಗಾಂ ತಾಲ್ಲೂಕು ದುಂಡಸಿ ಅರಣ್ಯ ವಲಯದಲ್ಲಿ ಎಷ್ಟು ಎಕರೆ ಅರಣ್ಯ ಪ್ರದೇಶವಿದೆ?

ಆ) ಸದರಿ ಅರಣ್ಯ ಪ್ರದೇಶದಿಂದ ಎಷ್ಟು ಕಟ್ಟಿಗೆಯನ್ನು ಮಾರಾಟ ಮಾಡಲಾಗಿದೆ ?

ಇ) ದುಂಡಸಿ ವಲಯದಲ್ಲಿ ಅರಣ್ಯ ಅಭಿವೃದ್ಧಿಗೊಳಿಸಲು ತೆಗೆದುಕೊಂಡ ಕ್ರಮಗಳೇನು ?

ಈ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಟಿಂಬರ್ ಡಿಪೋಗಳು ಇವೆ ? ಅವು ಯಾವುವು ? ವಿವಿಧ ಪೋಗಳಿಂದ ಎಷ್ಟು ಕಟ್ಟಿಗೆ ಮಾರಾಟವಾಗಿದೆ, ಅದರಿಂದ ಸರ್ಕಾರಕ್ಕೆ ಎಷ್ಟು ಲಾಭವಾಗಿದೆ ?